ಶ್ರೀ ಎಸ್. ಎಂ. ಯಾಹ್ಯಾ.—ಅರಕ್‌ನ್ನು ಸರ್ಕಾರ ಕಂಟ್ರೋಲ್ ಮಾಡಿಕೊಂಡು ಮನೋಪಲಿ ಮಾಡಿಕೊಂಡು ಬೇರೆಯವರಿಗೆ ಕೊಡುತ್ತೇವೆ. ರೀಟೇಲ್ ರೇಟ್ ಫಿಕ್ಸ್ ಮಾಡಿರುವುದಿಲ್ಲ.

ಶ್ರೀ ಟಿ. ಆರ್ ಶಾಮಣ್ಣ —ಅರಕನ್ನು ಅಳತೆ ಮಾಡುವಾಗ ಬಹಳ ಕಡಿಮೆ ಕೊಟ್ಟು ಕುಡುಕರಿಗೆ ಮೋಸಮಾಡುವುದು ತವ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ರೂಲ್ಸನ್ನು ಈ ಬಗ್ಗೆ ಕಟ್ಟುನಿಟ್ಟಾಗಿ ಜಾರಿ ಮಾಡಿದ್ದೇವೆ. ಅಳತೆ ಮಾಡುವ ಸಾಧನದ ಬಾಯಿ ತುಂಬ ಹಾಕದೆ ಕಡಿಮೆ ಕೊಡುವುದು ಮತ್ತು ಮೇಜುಗಳ ಮೇಲೆ ಇಟ್ಟು ಕೊಂಡು ಕೊಡುವುದು ನಡೆಯುತ್ತಿದೆ. ಅದರಲ್ಲಿ ಇಷ್ಟು ಪ್ರಮಾಣದ ಎತ್ತರ ವೇಜು ಇರಬೇಕು ಎಂದು ಕಾನೂನು ಇದೆ. ಕೆಲವು ಕಡೆ ಎತ್ತರ ಜಾಸ್ತಿಯಾಗಿಟ್ಟುಕೊಂಡು ನಿಂತುಕೊಂಡು ತೆಗೆದುಕೊಳ್ಳುವವರಿಗೆ ಕಾಣಿಸದ ಹಾಗೆ ಅಳತೆ ಮಾಡಿ ಕೊಡುವುದು ನಡೆಯುತ್ತಿತ್ತು. ಇದನ್ನೆಲ್ಲಾ ಎಕ್ಸ್‌ಸೈಜ್ ಕಮಿಷನರ್ ಪತ್ರೆ ಹಚ್ಚಿದ ಮೇಲೆ ಟೇಬಲ್ಸ್ ಎತ್ತರವನ್ನು ತಗ್ಗುಮಾಡಿ ಯಾವ ಮನುಷ್ಯ ನಿಂತುಕೊಂಡು ತೆಗೆದುಕೊಳ್ಳುತ್ತಾನೋ ಅವನಿಗೆ ಕಾಣಿಸುವ ಹಾಗೆ ಇರುವುದಕ್ಕೆ ಏರ್ಪಾಡು ಮಾಡಿದೆ. ಇದನ್ನು ರೆಗ್ಯುಲೇಟ್ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದಿರಲ್ಲ, When it is auctioned, I cannot say at this stage whether it is feasible or possible under the law to regulate the retail sale value. Anyway now that there is a suggestion we will examine carefully whether it is possible or not.

* *Interviews by K. P. S. C. and Departmental Committees*

486 SRI H G. CHANNAPPA (Magadi).—Will the Chief Minister be pleased to state —

(*a*) whether it is a fact that the Karnataka Pnblic Service ommission and Departmental Recruitment Commmittees are sending out interviews to the candidates seeking employment to the extent of only four times the number of vacancies.

(*b*) the intention of Karnataka Public Service Commission and Departmental Committee to restrict the number of candidates for interview;

(*c*) whether the Government has any proposal to suggest to Karnataka Public Service Commission and Departmental Committees to call all the candidates for interview whose application for the jobs are in order ?

SRI D. DEVARAJ URS (Chief Minister).—

(*a*) Yes.

(*b*) The rules under which recruitment is made require them to do so.

(*c*) No.

ಶ್ರೀ ಎಚ್. ಜಿ. ಚನ್ನಪ್ಪ.—ಒಂದು ಪೋಸ್ಟ್‌ಗೆ ೪ ಜನರನ್ನು ಏನು ಕರೆಯುತ್ತೀರಿ ಇದರಿಂದ ಅವರ ಹಕ್ಕುಭಾದ್ಯತೆಗೆ ಚ್ಯುತಿ ತಂದಂತೆ ಆಗುವುದಿಲ್ಲವೇ ?

† ಶ್ರೀ ಡಿ. ದೇವರಾಜ್ ಅರಸ್.—ಇದರ ಬಗ್ಗೆ ಹೈಕೋರ್ಟಿಗೆ ಹೋಗಿ, ಅವರು ಆ ಅಫೀಲನ್ನು ಸ್ಟಕ್‌ಡೌನ್ ಮಾಡಿ ಈಗಿರತಕ್ಕಂಥ ರೂಲ್ಸ್ ಸರಿಯಾಗಿದೆಯೆಂದು ಹೇಳಿದ್ದಾರೆ.

ಶ್ರೀ ಎಚ್. ಜಿ. ಚನ್ನಪ್ಪ.—ಈವಾಗ ಇದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.—ಒಂದು ಸಾರಿ ೧೦೦ ಪೋಸ್ಟ್‌ಗೆ ೧೦ ಸಾವಿರ ೨೦ ಸಾವಿರ ಅರ್ಜಿ ಬರುತ್ತದೆ, ಅದಕ್ಕೆ ಎಷ್ಟೋ ಕಾಲ ಹೋಗುತ್ತದೆ, ಮತ್ತು ಹಣ ಎಷ್ಟೋ ಹೋಗುತ್ತದೆ. ಆದಕಾರಣ ಅಭ್ಯರ್ಥಿಗಳ ಅನುಕೂಲತೆಯ ದೃಷ್ಟಿಯಿಂದ ಹೀಗೆ ಮಾಡಿರುವುದು, ಇಲ್ಲದಿದ್ದರೆ ನೂರು ಪೋಸ್ಟ್‌ಗೆ ೨೦,೨೫ ಸಾವಿರ ಅರ್ಜಿಗಳು ಬಂದರೆ ಅವರಿಗೆಲ್ಲಾ ಇಂಟರ್‌ವ್ಯೂ ಮಾಡಬೇಕಾದರೆ ೬ ತಿಂಗಳಾದರೂ ಮುಗಿಯುವುದಿಲ್ಲ. ಹಾಗೂ ಬೇರೆ ಬೇರೆ ಕಡೆಯಿಂದ ಬರತಕ್ಕಂಥವರೆಲ್ಲಾ ಬಹಳ ತೊಂದರೆ ಪಡುತ್ತಾರೆ. ಅದಕೋಸ್ಕರವೇ ೧೫ಕ್ಕೇ ೪ ಎಂದರೆ ರೂಲ್ಸ್ ಮಾಡಿದ್ದಾರೆ. ಅದರಂತೆ ಅವರು ಅನುಸರಿಸುತ್ತಿದ್ದಾರೆ. ಒಂದುವೇಳೆ ಆರ್ಡರ್ ಆಫ್ ಮೆರಿಟ್ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್‌ನವರು, ಶೆಡ್ಯೂಲ್ ಕ್ಲಾಸ್, ಟ್ರೈಬ್ಸ್‌ನವರು, ಮಿನಿಮಂ ಬರದೇ ಹೋದರೇ, ಅವರು ಸಿಕ್ಕುವುದೇ ಇಲ್ಲವೆಂದು ಕಂಡುಬಂದರೆ, ಇನ್ನೂ ಮಿನಿಮಂ ಕೆಳಗೆ ಇರತಕ್ಕಂಥವರನ್ನು ಮೋಡಿ ತೆಗೆದುಕೊಳ್ಳಬೇಕಾಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಇಂಟರ್‌ವ್ಯೂವನ್ನು ೧೫ಕ್ಕೆ ೪ ರಂದೆ ಕರೆಯುತ್ತೇವೆಂದು ತಾವು ಹೇಳಿದಿರಿ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಸಾಮಾನ್ಯ ಮನುಷ್ಯನಿಗೆ ಇಂಟರ್‌ವ್ಯೂ ಸಿಕ್ಕುವುದೇ ಇಲ್ಲ ಮಾನ್ಯ ರಾಚಯ್ಯನವರ ಮಗನಿಗೆ ಸಿಕ್ಕಬಹುದೇ ಹೊರತು, ಹಳ್ಳಿಯಲ್ಲಿರತಕ್ಕಂಥ ಕೆಂಚಣ್ಣನ ಮಗನಿಗೆ ಸಿಕ್ಕುವುದಿಲ್ಲ. ಆದುದರಿಂದ ಹಾಲಿ ಇರತಕ್ಕ ರೂಲ್ಸ್‌ನಲ್ಲಿ ಏನಾದರೂ ಸ್ವಲ್ಪ ಮಾಡಿಫಿಕೇಷನ್ ಮಾಡುವ ಹಾಗಿದ್ದರೆ, ಬ್ಯಾಕ್‌ವರ್ಡ್ ಕ್ಲಾಸ್ ಮಕ್ಕಳು ಏನಿದ್ದಾರೆ ಅವರಿಗೆ ೫೫–೧೦ ಗ್ರೇಸ್ ಮಾರ್ಕ್‌ಗಳನ್ನು ಕೊಡುವುದಕ್ಕೆ ಸಾಧ್ಯವಿದ್ದರೆ, ಆ ರೂಲ್ಸ್‌ನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಿ ನೋಡುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್.—ಈಗ ತಾವು ಏನು ಗ್ರೇಸ್ ಕೊಡುವ ಬಗ್ಗೆ ಹೇಳಿದಿರಿ ಅದರ ಬಗ್ಗೆ ಆಶ್ವಾಸನೆ ಕೊಡುವುದಕ್ಕೆ ಆಗುವುದಿಲ್ಲ. ನಿಮ್ಮ ಸೂಚನೆಯ ಬಗ್ಗೆ ಆಯೋಗದ ಅಧ್ಯಕ್ಷರನ್ನು ಕರೆದು ಅವರೊಡನೆ ಮಾತನಾಡುತ್ತೇನೆ. ಇದನ್ನು ಯಾವ ರೀತಿ ಅಕಾಮಂಡೇಟ್ ಮಾಡಲು ಸಾಧ್ಯವೋ ಎಂಬುದನ್ನು ನೋಡೋಣ. ಮತ್ತು ಇನ್ನೊಂದು ಕಷ್ಟವಿದೆ. ಬ್ಯಾಕ್‌ವರ್ಡ್ ಎಂದು ಹೇಳುವ ಕೆಲವರಿಗೆ ೧೫–೨೦ ಎಕರೆ ಜಮೀನು ಇರುತ್ತದೆ, ಅಂಥವರು ಬ್ಯಾಕ್‌ವರ್ಡ್ ಎಂದು ಸರ್ಟಿಫಿಕೇಟನ್ನು ತೆಗೆದುಕೊಂಡು ಬಂದು ಬಿಟ್ಟಿರುತ್ತಾರೆ. ಆದುದರಿಂದ ತಾವು ಹೇಳುವ ಸೂಚನೆ ಪರಿಶೀಲನೆ ಮಾಡಬೇಕಾಗಿದೆಂದು ಹೇಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ ತಾವು ಒಂದಕ್ಕೆ ನಾಲ್ಕರಂತೆ ಇಂಟರ್‌ವ್ಯೂ ಕರೆಯಬೇಕೆಂದು ಹೈಕೋರ್ಟ್‌ನಲ್ಲಿ ಆರ್ಡರ್ ಆಯಿತೆಂದು ಹೇಳಿದಿರಿ ಈ ರಾಜ್ಯದಲ್ಲಿ ಆಥಾರಾಷ್ಟ್ರದಲ್ಲಿ ನಮ್ಮ ತತ್ವದಂತೆ ಫ್ಯಾಮಿಲಿಗೆ ಒಂದಂ ಕೆಲಸವಾದರೂ ಕೊಡಬೇಕೆಂದು ಇದೆ. ಒನ್ ಮ್ಯಾನ್ ಒನ್ ಪೋಸ್ಟ್ ಎನ್ನುವ ತತ್ವವಿದೆ. ಆದರೆ ಈಗಿರತಕ್ಕಂಥ ಪರಿಸ್ಥಿತಿ ನೋಡಿದರೆ, ಎಲ್ಲಾ ದೊಡ್ಡ ದೊಡ್ಡ ಆಫೀಸರ್‌ರವರ ಮಕ್ಕಳೇ ಬರುತ್ತಾರೆ ಬಡವರು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಗತಿಕರು ಯಾರಿದ್ದಾರೆ ಅವರಿಗೆ ಕೆಲಸ ಸಿಕ್ಕುವುದಿಲ್ಲ. ಆದುದರಿಂದ ಸಮಾಜವಾದದ ತತ್ವದಂತೆ ಪ್ರತಿಯೊಬ್ಬರಿಗೂ ಕೆಲಸ ಸಿಗುವಂತೆ ಮಾಡಲು ರೂಲ್ಸ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿ, ಎಲ್ಲರಿಗೂ ಅವಕಾಶ ಕಲ್ಪನೆ ಮಾಡಿಕೊಡುವಂತೆ ಒಂದು ಆಜ್ಞೆಯನ್ನು ಜಾರಿಗೆ ತರುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್.—ನಾವು ಯಾವುದೇ ಒಂದು ವಿಷಯವನ್ನು ವಿಪರೀತವಾಗಿ ಎಳೆಯಬಾರದು. ನಮ್ಮ ತತ್ವಕ್ಕೆ ಅನುಸಾರವಾಗಿ ಸರ್ಕಾರಿ ನೌಕರಿಯನ್ನು ಎಲ್ಲರಿಗೂ ಹಂಚಿಬಿಡೋಣವೆಂದು ಹೇಳಿದರೆ, ಒಂದು ಫ್ಯಾಮಿಲಿಗೆ ಒಂದು ಕೆಲಸ ಕೊಡಬೇಕೆಂದು ಅಸೆಂಬ್ಲಿಯಲ್ಲಿ ನಿರ್ಣಯ ತಂದು ಪಾಸ್ ಮಾಡಿಬಿಡೋಣವೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮಗೆ ಒಬ್ಬ ಸುಪುತ್ರ ಗಂಡು ಮಗುವಾಗಲಿ ಎಂದು ಈ ಸಭೆಯಲ್ಲಿ ಕಾನೂನು ಪಾಸ್ ಮಾಡಿ ಬಿಡುತ್ತೇವೆಂದು ಇಟ್ಟುಕೊಳ್ಳಿ. ನೀವು ಬಂಜೆಯಾದರೆ ನಾವು ಏನು ಮಾಡೋಣ ?

ಶ್ರೀ ಡಿ. ದೇವರಾಜ್ ಅರಸ್.—ಸುಪುತ್ರ ಆಗಲೀ ಎಂದು ಹಾರೈಸುತ್ತೀರಾ ? ಹಾಗಾದರೆ ನೀವು ಮಂದುವೆಗೆ ಏರ್ಪಾಡು ಮಾಡಬೇಕಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ನೀವು ಮಂದುವೆಯಾಗುತ್ತೀರಿಎಂದು ತಿಳಿದರೆ ಹೆಣ್ಣು ಮಕ್ಕಳು ಲೈನಾಗಿ ಬಂದು ನಿಲ್ಲುತ್ತಾರೆ ನನಗೆ ಡಿಮ್ಯಾಂಡ್ ಜಾಸ್ತಿಯಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಹೇಳಿದಂಥ ಸಲಹೆಯನ್ನು ಯೋಚನೆ ಮಾಡಿ.

ಮಾನ್ಯ ಅಧ್ಯಕ್ಷಣೀಯವರೇ ಅವರು ಹೇಳಿದ ಹಾಗೆ ಯಾವುದೇ ಒಂದು ವಿಷಯವನ್ನು ಲಂಬಿಸಿ ಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಏನಾದರೂ ಅವರಿಗೆ ಅಕಾಮಡೇಟ್ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ನೋಡಿ ಹೇಳುತ್ತೇನೆಂದು ಆಗಲೇ ಹೇಳುತ್ತೇನೆ.

ಶ್ರೀ ಎನ್. ಬಸವಯ್ಯ.—ತಾವು ಈಗ ತಾನೇ ೧೫% ರಂತೆ ಇಂಟರ್‌ವ್ಯೂ ಕಳುಹಿಸಿದ್ದಾರೆಂದು ಹೇಳಿದಿರಿ, ಆದರೆ ಕೆಲವು ಸಂರ್ಭಗಳಲ್ಲಿ ೧೫% ರಂತೆ ಇಂಟರ್‌ವ್ಯೂ ಕರೆದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಅದು ರೂಲ್ಸ್‌ನಲ್ಲಿದೆ. ಅದರ ಪ್ರಕಾರ ಮಾಡಿರುತ್ತಾರೆ.

ಶ್ರೀ ಕೊಣಂದೂರು ಲಿಂಗಪ್ಪ.—ಸ್ವಾಮಿ ಮಾನ್ಯ ದೇವೇಗೌಡರವರು ಕೇಳಿದ ಪ್ರಶ್ನೆಗೆ ಪೂರಕವಾಗಿ ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಅರ್ಬನ್ ಮತ್ತು ರೂರಲ್ ಏರಿಯಾದವರಿಗೆ ಸಮನಾದ ಸೌಲಭ್ಯಗಳು ಇವೆ. ಆದರೆ ರೂರಲ್ ಏರಿಯಾದವರಿಗೆ ಹೆಚ್ಚಿನ ವಿಶೇಷವಾದಂಥ ಜಿಜರ್ವೇಷನ್ ಮಾಡುವುದಕ್ಕೆ ಏನಾದರೂ ಸಾಧ್ಯವೆ ? ಅರ್ಬನ್ ಮತ್ತು ರೂರಲ್ ಏರಿಯಾದವರಿಗೆ ಡಿಸ್ಪೆಂಕ್ಷನ್ ಇಡುವುದಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ್ ಅರಸ್.—ತಾವು ಕೇಳುತ್ತಿರುವುದು ಅರ್ಬನ್ ಮತ್ತು ರೂರಲ್ ಏರಿಯಾದವರಿಗೆ ಡಿಸ್ಪೆಂಕ್ಷನ್ ಮಾಡಿ ಎಂದು, ಬಹುಶ : ಕಾನ್‌ಸ್ಟಿಟ್ಯೂಷನ್ ಪ್ರಕಾರ ಅದನ್ನು ಮಾಡುವುದಕೆ ಕಷ್ಟವಾಗುತ್ತದೆ.

* *Postponement of Repayment of Short Term Loans*

528. K. H. HANUME GOWDA (Hassan) —Will the Minister for Co-operation be pleased to state.—

(*a*) the difficulties for the Government in postponing the repay ment of loan instalments for one year by receiving the interest due for that year in respect of loan received by the ryots in certain areas where crops have failed for want of rains the ryots are unable to repay the medium term loan taken from Co-operative Societies :

(*b*) whether the Government is of the opinion that by such an arrangement the ryots will get more relief ?

SRI S. M. KRISHNA (Minister for Industries and Parlimentary Affairs).— On behalf of SRI K. H. RANGANATH (Minister for Co-operation).—

(*a*) There is no difficulty in postponing the repayment of medium term loans taken by the members of agricultural Co-operative Societies, where the anewari has been declared as less than 6 annas by the Revenue Officers.

(*b*) Yes.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ನಾನು ಇಳಿನೇ ಪ್ರಶ್ನೆಯನ್ನು ಕೇಳುತ್ತೇನೆ.